THE SECOND EPISTLE OF JOHN.

## ಅಪೊಸ್ತಲನಾದ ಯೋಹಾನನ ಎರಡನೇ ಪತ್ರಿಕೆಯ ಪೀಠಿಕೆ.

ಅಪೊಸ್ತಲನಾದ ಯೋಹಾನನು ಈ ಪತ್ರಿಕೆಯನ್ನು ದೇವ ಭಕ್ತಳಾದ ಒಬ್ಬ ಉತ್ತಮ ಸ್ತ್ರೀಗೆ ಬರೆದಿದ್ದಾನೆ. ಅವಳಿಗೆ ಕುರಿಯಾ ಎಂಬ ಹೆಸರಿತ್ತೆಂದು ತೋರುತ್ತದೆ. ಕುರಿಯಾ ಅಂದರೆ, ಗ್ರೀಕ ಭಾಷೆಯಲ್ಲಿ ಸಭೆ ಎಂಬ ಅರ್ಥವಾಗುತ್ತದೆ. ಇದರ ಆಧಾರದಿಂದ ಕೆಲವರು ಈ ಪತ್ರಿಕೆ ಒಂದು ವಿಶೇಷ ಸಭೆಗೆ ಅಥವಾ ಹುದುವಾದ ಸಭೆಗೆ ಬರಿಯಲ್ಪಟ್ಟದ್ದೆಂದು ನೆನಸುತ್ತಾರೆ. ಈ ಅಭಿಪ್ರಾಯಕ್ಕೆ ತಕ್ಕ ಆಧಾರವಿಲ್ಲ. ಯೋಹಾನನ ಮೂರನೇ ಪತ್ರಿಕೆಯು ಗಾಯನೆಂಬ ಒಬ್ಬ ಕ್ರೈಸ್ತಸಹೋದರನಿಗೆ ಬರೆಯಲ್ಪಟ್ಟ ಪ್ರಕಾರ, ಈ ಪತ್ರಿಕೆಯು ಒಬ್ಬ ಕ್ರೈಸ್ತಸಹೋದರಿಗೆ ಬರೆಯಲ್ಪಟ್ಟದ್ದೆಂದು ಪ್ರತ್ಯಕ್ಷವಾಗಿ ತೋರುತ್ತದೆ. ಯೋಹಾನನ ಮೊದಲನೇ ಪತ್ರಿಕೆಯ ಹಾಗೆ ಈ ಪತ್ರಿಕೆಗಳು ಸಹ ೯೦ನೇ ವರುಷಕ್ಕೂ ೯೬ನೇ ವರುಷಕ್ಕೂ ಮಧ್ಯಕಾಲದಲ್ಲಿ ಬರೆಯಲ್ಪಟ್ಟಿರ ಬಹುದು.

ಈ ಪತ್ರಿಕೆಯ ಮೊದಲನೇ ವಚನದಲ್ಲಿ ಹಿರಿಯನೆಂಬುವದು ಗ್ರಂಥಕರ್ತನಾದ ಯೋಹಾನನನ್ನು ಕುರಿತದ್ದು. ಬೇರೆ ಅಪೊಸ್ತಲರೆಲ್ಲರೂ ಸತ್ತು ಹೋಗಿರಲಾಗಿ, ದೀರ್ಘಾಯುಸ್ಸುಳ್ಳವನಾಗಿ, ಬಹು ಕಾಲ ಜೀವದಿಂದ ಇದ್ದು, ಸಭೆಯಲ್ಲಿ ಶ್ರೇಷ್ಠ ಅಧಿಕಾರವನ್ನೂ ಘನವನ್ನೂ ಹೊಂದಿದ್ದ ಅಪೊಸ್ತಲನಿಗೆ ಹಿರಿಯನೆಂಬುವ ಹೆಸರು ಸಲ್ಲ ತಕ್ಕದ್ದಾಗಿದೆ. ಈ ಸಂಕ್ಷೇಪವಾದ ಪತ್ರಿಕೆಯು ಅರ್ಥದಲ್ಲಿಯೂ ಉಪದೇಶದಲ್ಲಿಯೂ ಯೋಹಾನನ ಮೊದಲನೇ ಪತ್ರಿಕೆಗೆ ಸರಿಯಾಗಿದೆ.

ಈ ಪತ್ರಿಕೆಯಲ್ಲಿರುವ ಹದಿಮೂರು ವಚನಗಳಲ್ಲಿ ಎಂಟು ವಚನಗಳ ಅರ್ಥವು ಮೊದಲನೇ ಪತ್ರಿಕೆಯ ಅರ್ಥಕ್ಕೆ ಸರಿಯಾಗಿದೆ. ಭಕ್ತಿಯಲ್ಲಿ ಶ್ರೇಷ್ಠಳಾಗಿದ್ದ ಒಬ್ಬ ಉತ್ತಮ ಸ್ತ್ರೀಯ ಗುಣಶೀಲಗಳೂ, ಅವಳು ತನ್ನ ಮಕ್ಕಳನ್ನು ಸತ್ಯದಲ್ಲಿ ನಡಿಸಿದ ರೀತಿಯೂ ಈ ಪತ್ರಿಕೆಯಲ್ಲಿ ಚನ್ನಾಗಿ ತೋರುತ್ತವೆ. ದೇವಭಕ್ತಿಯಲ್ಲಿ ಶೇರಿದವಳಾದ ಈ ದೇವದಾಸಿಯನ್ನೂ, ಅವಳ ಕುಟುಂಬದವರನ್ನೂ, ಪ್ರೀತಿಯಲ್ಲಿ ಮುಖ್ಯನಾಗಿ ಪ್ರಕಾಶಿಸಿದ ಅಪೊಸ್ತಲನಾದ ಯೋಹಾನನು ಪ್ರೀತಿ ಮಾಡಿ, ಅವರಿಗೆ ಕೆಲವು ಬುದ್ಧಿಮತಿಗಳನ್ನು ಪ್ರೀತಿಯಿಂದ ಹೇಳಿದ್ದು ಸಹಜವಾಗಿದೆ.

---

# THE SECOND EPISTLE OF JOHN.

## ಅಪೊಸ್ತಲನಾದ
## ಯೋಹಾನನ ಎರಡನೇ ಪತ್ರಿಕೆ.

ಮಾರ್ಗ ತಪ್ಪದೆ ಸ್ಥಿರವಾಗಿ ನಡೆದು ಕೊಳ್ಳ ಬೇಕು; ವಂಚಕರನ್ನು ಬಿಟ್ಟು ತೊಲಗ ಬೇಕು ಎಂಬುವದು.

ಹಿರಿಯನು—ನಮ್ಮಲ್ಲಿ ನೆಲೆಯಾಗಿರುವಂಥ, ಎಂದೆಂದಿಗೂ ನಮ್ಮ ಸಂಗಡ ಇರುವಂಥ, ಸತ್ಯಕ್ಕೋಸ್ಕರ,
೨ ನಾನು ಮಾತ್ರವಲ್ಲ, ಸತ್ಯವನ್ನು ತಿಳಿದವರೆಲ್ಲರೂ, [1]ಸತ್ಯದಲ್ಲಿ ಪ್ರೀತಿ ಮಾಡುವ, ಆಯಲ್ಪಟ್ಟ [2]ಧೊರೆಸಾ
೩ ನಿಗೂ, ಅವಳ ಮಕ್ಕಳಿಗೂ ಬರೆಯುವದು— ತಂದೆಯಾದ ದೇವರಿಂದಲೂ, ತಂದೆಯ ಮಗನಾಗಿರುವ
ಕರ್ತನಾದ ಯೇಸು ಕ್ರಿಸ್ತನಿಂದಲೂ, [3]ಕೃಪೆಯೂ ಕರುಣೆಯೂ ಸಮಾಧಾನವೂ ಸತ್ಯದಲ್ಲಿಯೂ ಪ್ರೀತಿಯ
ಲ್ಲಿಯೂ ನಿಮ್ಮ ಸಂಗಡ ಇರಲಿ.

೪ ನಾವು ತಂದೆಯಿಂದ ಕಟ್ಟಳೆ ಹೊಂದಿದ ಪ್ರಕಾರ ಸತ್ಯದಲ್ಲಿ ನಡೆದು ಕೊಳ್ಳುವವರನ್ನು [4]ನಿನ್ನ ಮಕ್ಕಳಲ್ಲಿ
ಕಂಡು ಕೊಂಡು, ಅತಿ ಸಂತೋಷ ಪಟ್ಟೆನು.

೫ ಮತ್ತು ಈಗ, ಧೊರೆಸಾನಿಯೇ, ನಿನಗೆ ಹೊಸ ಕಟ್ಟಳೆಯ ಹಾಗಲ್ಲ, [5]ಆದಿಯಿಂದ ನಮಗಿದ್ದ ಕಟ್ಟಳೆಯನ್ನು
೬ ಬರೆದು, ನಾವು ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕೆಂದು ನಿನ್ನನ್ನು ಬೇಡಿ ಕೊಳ್ಳುತ್ತೇನೆ. ಇದೇ ಪ್ರೀತಿ—
ನಾವು ಅವನ ಕಟ್ಟಳೆಗಳ ಪ್ರಕಾರ ನಡೆದು ಕೊಳ್ಳುವದೇ; ಅದರಲ್ಲಿ ನಡೆದು ಕೊಳ್ಳ ಬೇಕೆಂದು, ನೀವು ಆದಿ
ಯಿಂದ ಕೇಳಿದ ಪ್ರಕಾರ, [6]ಇದೇ ಕಟ್ಟಳೆ.

---

1. ೧—೪. ವಚನಗಳಲ್ಲಿ ಸತ್ಯವೆಂಬುವ ಶಬ್ದವು ಆಗಾಗ್ಯೆ ಬರುತ್ತದೆ. ಉತ್ತಮ ಭಕ್ತಳಾದ ಅವಳನ್ನು ಯೋಹಾನನು ಯಥಾರ್ಥವಾಗಿ ಸ್ನೇಹಿಸಿ, ಸತ್ಯದ ನಿಮಿತ್ತವಾಗಿಯೂ ಪ್ರೀತಿ ಮಾಡಿದನು. ಕ್ರಿಸ್ತನ ಭಕ್ತರ ಪ್ರೀತಿಯು ನಿತ್ಯ ದೇವರ ಸತ್ಯ ಸುವಾರ್ತೆಗೆ ಅನುಸಾರವಾಗಿರುವದರಿಂದ ಅದು ಕಪಟವಿಲ್ಲದ ಪ್ರೀತಿಯಾಗಿದೆ. (೧, ೨. ವ.) ಇಂಥಾ ಸತ್ಯವೂ ಪ್ರೀತಿಯೂ ಯಾರಲ್ಲಿ ನೆಲೆಯಾಗಿರುತ್ತವೋ, ಅವರು ಸತ್ಯಪರನಾದ ದೇವರ ಕೃಪೆಯನ್ನೂ ಕರುಣೆಯನ್ನೂ ಸಮಾಧಾನವನ್ನೂ ಹೊಂದಿ ಅನುಭವಿಸುವರು. (೩. ವ.)

2. ಧೊರೆಸಾನಿ ಎಂಬುವದಕ್ಕೆ ಮೂಲ ಭಾಷೆಯಲ್ಲಿ "ಕುರಿಯಾ" ಎಂಬದಾಗಿ ಉಂಟು. ಇದು ಆಕೆಯ ಹೆಸರೆಂದು ತೋರುತ್ತದೆ. (ಪೀಠಿಕೆಯಲ್ಲಿ ನೋಡ ಬೇಕು.)

3. ಕೃಪೆಗೂ ಕರುಣೆಗೂ ಬಹಳ ವ್ಯತ್ಯಾಸವಿಲ್ಲದಿದ್ದಾಗ್ಯೂ, ಕೃಪೆಯು ಪಾಪವನ್ನೂ, ಕರುಣೆಯು ನಿರ್ಭಾಗ್ಯವನ್ನೂ ಪರಿಹರಿಸುವವೆಂದು ಹೇಳ ಬಹುದು. ಪಾಪನಿವರ್ತಿಯು ದೊಡ್ಡ ಉಪಕಾರವಾಗಿರುವದರಿಂದ ಕೃಪೆ ಎಂಬ ಶಬ್ದವು ಮೊದಲು ಹೇಳಿ ಇದೆ. ಈ ಕೃಪೆಯನ್ನೂ ಕರುಣೆಯನ್ನೂ ಹೊಂದಿದವರೇ ಸಮಾಧಾನವನ್ನು ಅನುಭವಿಸುವರು.

4. ಈ ಕ್ರೈಸ್ತಸಹೋದರಿಯ ಮಕ್ಕಳಲ್ಲಿ ಕೆಲವರು ಸತ್ಯದಲ್ಲಿ ನಡೆಯುವದನ್ನು ಕುರಿತು ಯೋಹಾನನು ಕೇಳಿರುವನು; ಅಥವಾ ಕಣ್ಣಿನಿಂದ ಕಂಡಿರುವನು. ಆ ಕುಟುಂಬಕ್ಕೆ ಶೇರಿದ ಮಿಕ್ಕಾದವರು ಸತ್ಯದ ಪ್ರಕಾರ ನಡೆದ ಭಕ್ತರೋ ಅಲ್ಲವೋ ಎಂಬುವದರ ನಿಶ್ಚಯ ತಿಳಿಯದು. ಕುಟುಂಬಗಳಿಗೂ ಸಭೆಗಳಿಗೂ ಶೇರಿದವರು ಸತ್ಯದಲ್ಲಿ ನಡಿಯುವದನ್ನು ಕಾಣುವದೇ ಉತ್ತಮ ಬೋಧಕರಿಗೆ ಬಹಳ ಸಂತೋಷವು.

5. ಈ ಕಟ್ಟಳೆಯನ್ನು ಕೃಪೆಯುಳ್ಳ ಕ್ರಿಸ್ತನ ಬಾಯಿಂದ ಕೇಳಿ ತಿಳುಕೊಂಡರು. (೧ ಯೋಹಾ. ೨. ೭; ೩. ೨೩. ಯೋಹಾ. ೧೩. ೩೪.)

6. ದೇವರನ್ನೂ ಆತನ ಮಕ್ಕಳನ್ನೂ ಪ್ರೀತಿ ಮಾಡುವದಕ್ಕೆ ವಿಧೇಯತ್ವವೇ ಗುರುತಾಗಿಯೂ ದೃಷ್ಟಾಂತವಾಗಿಯೂ ಇದೆ. (ಯೋಹಾ. ೧೪. ೧೫, ೨೧; ೧೫. ೧೪.)

೭ ಯಾಕಂದರೆ, ಯೇಸು ಕ್ರಿಸ್ತನು ಮಾಂಸದಲ್ಲಿ ಬಂದನೆಂದು, ಅರಿಕೆ ಮಾಡದ ಅನೇಕ [1]ಮೋಸಗಾರರು ಲೋ
ಕದಲ್ಲಿ ಪ್ರವೇಶಿಸಿದ್ದಾರೆ; ಇವನೇ ಮೋಸಗಾರನೂ ಅಂತಿಕ್ರಿಸ್ತನೂ ಆಗಿದ್ದಾನೆ.
೮ ನಾವು [2]ಕಷ್ಟ ಮಾಡಿದವುಗಳನ್ನು ಕಳಕೊಳ್ಳದೆ, ಪೂರ್ಣ ಪ್ರತಿಫಲ ತಕ್ಕೊಳ್ಳುವ ಹಾಗೆ, ನಿಮ್ಮನ್ನು ನೀವೇ
ನೋಡಿ ಕೊಳ್ಳಿರಿ.
೯ ಕ್ರಿಸ್ತನ ಬೋಧನೆಯಲ್ಲಿ ನೆಲೆಯಾಗಿರದೆ, ಮಿಾರುವ ಪ್ರತಿ ಮನುಷ್ಯನು [3]ದೇವರನ್ನು ಹೊಂದದೆ ಇದ್ದಾನೆ.
ಕ್ರಿಸ್ತನ ಬೋಧನೆಯಲ್ಲಿ ನೆಲೆಯಾಗಿರುವವನೇ ತಂದೆಯನ್ನೂ ಮಗನನ್ನೂ ಹೊಂದಿದ್ದಾನೆ.
೧೦ [4]ಒಬ್ಬನು ಈ ಬೋಧನೆಯನ್ನು ತಾರದೆ, ನಿಮ್ಮ ಬಳಿಗೆ ಬಂದರೆ, ಅವನನ್ನು ಮನೆಯಲ್ಲಿ ಅಂಗೀಕರಿಸ ಬೇ
೧೧ ಡಿರಿ; ಅವನಿಗೆ [5]ಶುಭವಾಗಲಿ ಎಂದು ಹೇಳ ಬೇಡಿರಿ. ಯಾಕಂದರೆ ಅವನಿಗೆ ಶುಭವಾಗಲಿ ಎಂದು ಹೇಳು
ವವನು ಅವನ ದುಷ್ಟ ಕ್ರಿಯೆಗಳಲ್ಲಿ ಪಾಲುಗಾರನಾಗಿದ್ದಾನೆ.
೧೨ ನಿಮಗೆ ಬರೆಯುವದಕ್ಕೆ ನನಗೆ ಬಹಳ ಉಂಟು; ಆದರೆ ಕಾಗದದಿಂದಲೂ ಮಶಿಯಿಂದಲೂ ಬರೆಯ ಮನ
ಸ್ಸಿಲ್ಲದೆ, ನಮ್ಮ ಸಂತೋಷವು ಸಂಪೂರ್ಣವಾಗುವ ಹಾಗೆ, [6]ನಿಮ್ಮ ಬಳಿಗೆ ಬಂದು, ಮುಖಾಮುಖಿಯಾಗಿ
ಮಾತಾಡ ನಿರೀಕ್ಷಿಸುತ್ತೇನೆ.
೧೩ ಆಯಲ್ಪಟ್ಟ ನಿನ್ನ [7]ಸಹೋದರಿಯ ಮಕ್ಕಳು ನಿನ್ನನ್ನು ವಂದಿಸುತ್ತಾರೆ. ಆಮೆನ್.

---

1. ಕ್ರಿಸ್ತನ ಅವತಾರವನ್ನು ಬೊಂಕುವ ಅಂತಿಕ್ರಿಸ್ತರೂ ಕಳ್ಳ ಪ್ರವಾದಿಗಳೂ ಆದ ಅನೇಕ ಮೋಸಗಾರರು ಸಭೆಯಲ್ಲಿ ಹೊಕ್ಕು, ಅನೇಕರನ್ನು ತಮ್ಮ ಮಾಯಬಲೆಯಲ್ಲಿ ಬೀಳಿಸಿ ಕೆಡಿಸ ಹೇತುವೆಯಾಗಿರುವ ಕಾರಣದಿಂದ, ನಾವು ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕೆಂದು ೫ನೇ ವಚನದಲ್ಲಿರುವ ಕಟ್ಟಳೆಯನ್ನು ಹೇಳುತ್ತಾನೆ. (ಈ ವಂಚಕರ ತಪ್ಪು ಬೋಧನೆಗಳನ್ನು ಕುರಿತು, ೧ ಯೋಹಾ. ೪. ೧—೩. ವಚನಗಳ ವ್ಯಾಖ್ಯಾನ ನೋಡ ಬೇಕು.)

2. ಕ್ರಿಸ್ತನ ಉತ್ತಮ ದಾಸರಿಗೆ ಅವರ ಕಷ್ಟಕ್ಕೆ ತಕ್ಕ ಪೂರ್ಣ ಪ್ರತಿಫಲವು ದೊರಕದೆ ಇರಲಾರದು.

3. (೧ ಯೋಹಾ. ೨. ೨೩. ವಚನದ ವ್ಯಾಖ್ಯಾನ ನೋಡ ಬೇಕು.) ಮಿಾರುವವನು ಎಂಬುವದಕ್ಕೆ ಕೆಲ ಕೈಬರಹದ ಪ್ರತಿಗಳಲ್ಲಿ ಮುನ್ನಡಿಯುವವನು ಎಂಬದಾಗಿ ಉಂಟು. ಮುನ್ನಡೆದು ದಾರಿ ತೋರಿಸುವ ಬೋಧಕರು ಸತ್ಯದಲ್ಲಿ ನೆಲೆಯಾಗಿರದಿದ್ದರೆ, ದೇವರನ್ನು ಹೊಂದಿದವರಾಗಿಯೂ ಆತನ ಆಶೀರ್ವಾದವುಳ್ಳವರಾಗಿಯೂ ಇರಲಾರರು.

4. ಈ ಬೋಧನೆ ಅಂದರೆ, ದೇವರು ಮಾಂಸದಲ್ಲಿ ಪ್ರತ್ಯಕ್ಷವಾದನೆಂಬ ಅಪೊಸ್ತಲರ ಮುಖ್ಯ ಬೋಧನೆಯು.

5. ಈ ಮುಖ್ಯ ಬೋಧನೆ ಬೋಧಿಸದವನನ್ನು ಮನೆಯಲ್ಲಿ ಶೇರಿಸಿ ಉಪಚರಿಸುವದೂ, ಸಹೋದರನೆಂದು ಭಾವಿಸುವದೂ ಸರಿಯಲ್ಲ. ಹಾಗೆ ಮಾಡುವವರು ಅವನ ದುಷ್ಕ್ರಿಯೆಗಳಲ್ಲಿ ಪಾಲುಗಾರರಾಗುವರು.

6. ಯೋಹಾನನು ಪಾತ್ಮೊಸ್ ದ್ವೀಪಕ್ಕೆ ಶೆರೆಯಾಗಿ ಹೋಗುವದಕ್ಕಿಂತ ಮುಂಚೆ ಈ ಪ್ರಯಾಣ ಮಾಡಿರುವನು. ಬರಹದಿಂದ ಬರುವ ಸಂತೋಷಕ್ಕಿಂತ ಮುಖದರ್ಶನದಿಂದ ಅಧಿಕ ಸಂತೋಷವಾಗುವದು.

7. ಈ ಪತ್ರಿಕೆ ಹೊಂದಿದ ಭಕ್ತಳ ಹಾಗೆ ಅವಳ ಸಹೋದರಿ ಸಹ ಭಕ್ತಳಾಗಿದ್ದಳು. ಈ ಸಹೋದರಿ ಸತ್ತು ಹೋಗಿದ್ದಳೆಂದು ತೋರುತ್ತದೆ. ಭಕ್ತಿಯುಳ್ಳ ಅವಳ ಮಕ್ಕಳು ತಮ್ಮ ಚಿಕ್ಕ ತಾಯಿಯನ್ನು ವಂದಿಸುತ್ತಾರೆ.

~~~~~~~~~~~~~~~~~~~~

# THE THIRD EPISTLE OF JOHN.

## ಅಪೊಸ್ತಲನಾದ ಯೋಹಾನನ ಮೂರನೇ ಪತ್ರಿಕೆಯ ಪೀಠಿಕೆ.

ಈ ಪತ್ರಿಕೆಯನ್ನು ಹೊಂದಿದ ಗಾಯನೆಂಬವನು ಯಾರೆಂದು ನಿಶ್ಚಯಿಸುವದು ಅಸಾಧ್ಯವಾಗಿದೆ. ಇವನು ಒಂದು ವೇಳೆ ರೋಮಾ. ೧೬. ೨೩ಲ್ಲಿಯೂ, ೧ ಕೊರಿ. ೧. ೧೪ಲ್ಲಿಯೂ ಹೇಳಲ್ಪಟ್ಟ ಕ್ರಿಸ್ತಭಕ್ತನಾಗಿರ ಬಹುದು. ಇವನು ಭಕ್ತಿಯಲ್ಲಿ ಪ್ರಖ್ಯಾತಿಯುಳ್ಳವನಾಗಿಯೂ, ಉತ್ತಮ ಬೋಧಕರನ್ನು ಉಪಚರಿಸುವದರಲ್ಲಿ ಕೀರ್ತಿ ಹೊಂದಿದವನಾಗಿಯೂ, ಸ್ವಾಧೀನವಾದ ಸಂಪತ್ತುಳ್ಳವನಾಗಿಯೂ ಇದ್ದನು. ಅಪೊಸ್ತಲನಾದ ಯೋಹಾನನು ಇವನ ಸದ್ಗುಣ ಸತ್ಕ್ರಿಯೆಗಳಿಗಾಗಿ ಇವನನ್ನು ಹೊಗಳಿ, ಅತ್ಯಾಶೆಯುಳ್ಳವನಾದ ದಿಯೋತ್ರೆಫನೆಂಬವನಿಗೆ ಎಚ್ಚರಿಕೆಯಾಗಿರ ಬೇಕೆಂದೂ, ದೆಮೇತ್ರಿಯನೆಂಬವನನ್ನು ಪ್ರೀತಿ ಮಾಡ ಬೇಕೆಂದೂ ಹೇಳಿ, ಮಿಕ್ಕಾದ ಕಾರ್ಯಗಳನ್ನು ಮುಖಾಮುಖವಾಗಿ ಮಾತಾಡಿ ಕೊಳ್ಳ ಬಹುದೆಂದೂ ಬರೆದು, ಪತ್ರಿಕೆಯನ್ನು ಮುಗಿಸುತ್ತಾನೆ. ಈ ಪತ್ರಿಕೆಯನ್ನೂ, ಇದಕ್ಕೆ ಮುಂಚಿನ ಎರಡನೇ ಪತ್ರಿಕೆಯನ್ನೂ, ಯೋಹಾನನು ಎಫೆಸ ಪಟ್ಣದಲ್ಲಿ ಬರೆದನೆಂದು ತೋರುತ್ತದೆ. ಈ ಪತ್ರಿಕೆಗಳನ್ನು ಹೊಂದಿದವರಾದ ಗಾಯನನ್ನೂ, ಕುರಿಯಾ ಎಂಬ ಧೊರೆಸಾನಿಯನ್ನೂ ಶೀಘ್ರವಾಗಿ ಕಾಣುವೆನೆಂದು ಯೋಹಾನನು ಹೇಳಿರುವದರಿಂದ, ಇವರು ವಾಸ ಮಾಡುತ್ತಿದ್ದ ಊರುಗಳು ಎಫೆಸಕ್ಕೆ ಸಮಿಾಪವಾಗಿರುವವೆಂದು ಊಹಿಸ ತಕ್ಕದ್ದಾಗಿದೆ. ಈ ಎರಡು ಪತ್ರಿಕೆಗಳೂ ಇಬ್ಬರು ಭಕ್ತರಿಗೆ ಬರೆಯಲ್ಪಟ್ಟವುಗಳಾಗಿರುವದರಿಂದ, ಇವುಗಳನ್ನು ಹುದುವಾದ ಪತ್ರಿಕೆಗಳೆಂದು ಹೇಳ ಕೂಡದು.
~~~~~~~~~~~~~~~~~~~~